# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಹುದ್ದೆಗಳನ್ನು ಭರ್ತಿ ಮಾಡುವಲ್ಲಿ ನಿಗಧಿಪಡಿಸಿರುವ ಷರತ್ತು ಮತ್ತು ನಿಬಂಧನೆಗಳು.

**ಓದಲಾಗಿದೆ:-**

1. ಸರ್ಕಾರದ ಆದೇಶ ಸಂಖ್ಯೆ:ಪಿಡಿ/8/ಇವಿಎನ್ (2)2011, ಬೆಂಗಳೂರು, ದಿನಾಂಕ:11.07.2011.
2. ಸರ್ಕಾರದ ಆದೇಶ ಸಂಖ್ಯೆ:ಪಿಡಿ 90 ಕೆಇಎ 2012, ಬೆಂಗಳೂರು, ದಿನಾಂಕ:16.04.2013.
3. ದಿನಾಂಕ:12.10.2018ರಂದು ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಅವರ ಅಧ್ಯಕ್ಷತೆಯಲ್ಲಿ ನಡೆದ ಕರ್ನಾಟಕ ಮೌಲ್ಯ ಮಾಪನ ಪ್ರಾಧಿಕಾರದ 5ನೇ ಸಾಮಾನ್ಯ ಸಭೆಯ ನಡವಳಿಗಳು.
4. ಸರ್ಕಾರದ ಆದೇಶ ಸಂಖ್ಯೆ:ಪಿಡಿಎಸ್ 36 ಪಿಎಸ್ ಡಿ 2019 ಬೆಂಗಳೂರು, ದಿನಾಂಕ:04.07.2019.
5. ದಿನಾಂಕ:03.08.2019ರಂದು ನಡೆದ ಕರ್ನಾಟಕ ಮೌಲ್ಯ ಮಾಪನ ಪ್ರಾಧಿಕಾರದ 19ನೇ ಆಡಳಿತ ಮಂಡಳಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯ.
6. ದಿನಾಂಕ:02.02.2021ರಂದು ನಡೆದ ಕರ್ನಾಟಕ ಮೌಲ್ಯ ಮಾಪನ ಪ್ರಾಧಿಕಾರದ ವಿಶೇಷ ಸಾಮಾನ್ಯ ಸಭೆ.

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮಾಂಕ (1)ರ ಸರ್ಕಾರದ ಆದೇಶದಲ್ಲಿ ಸರ್ಕಾರದ ಅಭಿವೃದ್ಧಿ ನೀತಿಗಳು ಮತ್ತು ಕಾರ್ಯಕ್ರಮಗಳ ಮೌಲ್ಯಮಾಪನವನ್ನು ಪಾರದರ್ಶಕ ಮತ್ತು ಪರಿಣಾಮಕಾರಿಯಾಗಿ ಕೈಗೊಳ್ಳಲು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವನ್ನು(ಕೆ.ಇ.ಎ) ಸೃಜಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮಾಂಕ (2)ರ ಸರ್ಕಾರದ ಆದೇಶದಲ್ಲಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಚಟುವಟಿಕೆಗಳನ್ನು ನಿರ್ವಹಿಸಲು ಅರ್ಹತಾ ಮಾನದಂಡಗಳನ್ನು ಪ್ರಸ್ತಾಪಿಸಿ, ಪ್ರಾಧಿಕಾರಕ್ಕೆ ಖಾಯಂ ಹುದ್ದೆಗಳನ್ನು ಮಂಜೂರು ಮಾಡಿ ಆದೇಶಿಸಿದೆ.

ಮೇಲೆ ಓದಲಾದ ಕ್ರಮಾಂಕ (3)ರ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ 05ನೇ ಸರ್ವ ಸದಸ್ಯರ ಸಭೆಯಲ್ಲಿ ಪ್ರಾಧಿಕಾರಕ್ಕೆ ಮಂಜೂರಾಗಿದ್ದ ಹುದ್ದೆಗಳನ್ನು ಮರು ವರ್ಗೀಕರಣ ಮಾಡಲು ತೀರ್ಮಾನಿಸಲಾಗಿದೆ.

ಮೇಲೆ ಓದಲಾದ ಕ್ರಮಾಂಕ (4)ರ ಆದೇಶದಲ್ಲಿ ಪ್ರಾಧಿಕಾರಕ್ಕೆ ಮಂಜೂರಾದ ಹುದ್ದೆಗಳ ಪೈಕಿ ಕೆಲವು ಹುದ್ದೆಗಳನ್ನು ಹೊರತುಪಡಿಸಿ ಮತ್ತು ಕೆಲವು ಹುದ್ದೆಗಳನ್ನು ವೇತನ ಶ್ರೇಣಿಯೊಂದಿಗೆ ಮರು ವರ್ಗೀಕರಿಸಿ, ಆದೇಶಿಸಲಾಗಿದೆ.

.....2

ಮೇಲೆ ಓದಲಾದ ಕ್ರಮಾಂಕ (5)ರ ನಿರ್ಣಯದಂತೆ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಆಡಳಿತ ಮಂಡಳಿ ಸಭೆಯಲ್ಲಿ ಪ್ರಾಧಿಕಾರದ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಇತರೆ ಹಿಂದುಳಿದ ವರ್ಗಗಳು ಹಾಗೂ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಆರ್ಟಿಕಲ್ 371ಜೆ ಅಡಿಯಲ್ಲಿ ಕೆಲವು ಹುದ್ದೆಗಳನ್ನು ಮೀಸಲಿಟ್ಟು, ಸದರಿ ಹುದ್ದೆಗಳಿಗೆ ಅರ್ಹತಾ ಮಾನದಂಡಗಳನ್ನು ಮಾರ್ಪಡಿಸಲು ಅನುಮೋದಿಸಲಾಗಿದೆ.

ಮೇಲೆ ಕ್ರಮಾಂಕ (6)ರಲ್ಲಿ ಓದಲಾದ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ವಿಶೇಷ ಸಾಮಾನ್ಯ ಸಭೆಯಲ್ಲಿ ಪ್ರಾಧಿಕಾರದ ಮುಖ್ಯ ಮೌಲ್ಯ ಮಾಪನಾಧಿಕಾರಿ ಹುದ್ದೆಯನ್ನು ತಾಂತ್ರಿಕ ಹುದ್ದೆ ಎಂದು ಪರಿಗಣಿಸಿ, ಯಾವುದೇ ಅಖಿಲ ಭಾರತ ಸೇವಾ ಅಧಿಕಾರಿಯು ಕರ್ನಾಟಕ ಮೌಲ್ಯ ಮಾಪನ ಪ್ರಾಧಿಕಾರದ ಮುಖ್ಯ ಮೌಲ್ಯ ಮಾಪನಾಧಿಕಾರಿ ಹುದ್ದೆಗೆ ನಿಯೋಜನೆ ಮೇಲೆ ನೇಮಕಗೊಳ್ಳಲು ಅಗತ್ಯ ಶೈಕ್ಷಣಿಕ ಹಾಗೂ ಅಪೇಕ್ಷಣಿಯ ಅರ್ಹತೆಗಳನ್ನು ನಿಗಧಿಪಡಿಸಿ ತೀರ್ಮಾನಿಸಲಾಗಿದೆ.

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಎಲ್ಲಾ ವೃಂದದ ಹುದ್ದೆಗಳನ್ನು ಭರ್ತಿ ಮಾಡಲು ಅಗತ್ಯ ಷರತ್ತು ಮತ್ತು ನಿಬಂಧನೆಗಳನ್ನು ನಿಗಧಿಪಡಿಸಲು ತೀರ್ಮಾನಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ:ಪಿಡಿಎಸ್ 07 ಎಸ್‌ಎಸ್‌ಎಂ 2023, ಬೆಂಗಳೂರು</u>**
**<u>ದಿನಾಂಕ:31ನೇ ಜನವರಿ 2023.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ, ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ವ್ಯಾಪ್ತಿಗೆ ಒಳಪಡುವ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಎಲ್ಲಾ ವೃಂದದ ಹುದ್ದೆಗಳನ್ನು ನೇರ ನೇಮಕಾತಿ/ನಿಯೋಜನೆ/ಹೊರಗುತ್ತಿಗೆ/ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳನ್ನು ವಿಧಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಆದೇಶಿಸಿದೆ.

## ಕರ್ನಾಟಕ ಮೌಲ್ಯ ಮಾಪನ ಪ್ರಾಧಿಕಾರದಲ್ಲಿನ ಖಾಯಂ ಹುದ್ದೆಗಳ ಅರ್ಹತಾ ಮಾನ ದಂಡಗಳು.

| ಕ್ರಮ ಸಂ. | ಹುದ್ದೆಗಳು | ಶೈಕ್ಷಣಿಕ ವಿದ್ಯಾರ್ಹತೆ | ಅಪೇಕ್ಷಣೀಯ ಅರ್ಹತೆಗಳು | ಭರ್ತಿ ಮಾಡುವ ಮೂಲ |
|---|---|---|---|---|
| 1. | ಮುಖ್ಯ ಮೌಲ್ಯ ಮಾಪನಾಧಿಕಾರಿ | ಸಾರ್ವಜನಿಕ ನೀತಿ/ಆಡಳಿತ/ಅರ್ಥಶಾಸ್ತ್ರ/ನಿರ್ವಹಣೆ/ ಯಾವುದೇ ಇತರೆ ಸಂಬಂಧಿತ ಸಾಮಾಜಿಕ ವಿಜ್ಞಾನ ವಿಭಾಗದಲ್ಲಿ ಪಿಹೆಚ್ ಡಿ ಪದವಿ | ಲೇಖನಗಳು ಮತ್ತು ಪುಸ್ತಕಗಳ ಪ್ರಕಟಣೆ, ಅಂತಹ ಅಭಾಸೇ ಅಧಿಕಾರಿಯ ಲಭ್ಯತೆಯ ಅನುಪಸ್ಥಿತಿಯಲ್ಲಿ ಇತರೆ ಅಧಿಕಾರಿಗಳನ್ನು ಪರಿಗಣಿಸುವುದು. | ಅಖಿಲ ಭಾರತ ಸೇವೆಯ ಅಧಿಕಾರಿಗಳು |
| 2. | ಅಪರ ಮುಖ್ಯ ಮೌಲ್ಯಮಾಪನಾಧಿಕಾರಿ | ಸಾರ್ವಜನಿಕ ನೀತಿ/ಸಾರ್ವಜನಿಕ ಆಡಳಿತ/ಅರ್ಥಶಾಸ್ತ್ರ, ನಿರ್ವಹಣೆ/ಅಭಿವೃದ್ಧಿ ಅಧ್ಯಯನಗಳ ಸ್ನಾತಕೋತ್ತರ ಪದವಿಯೊಂದಿಗೆ ಪಿಹೆಚ್‌ಡಿ | ಲೇಖನಗಳು ಮತ್ತು ಪುಸ್ತಕಗಳ ಪ್ರಕಟಣೆ/ಬೋಧನೆ ಸಂಶೋಧನೆ ಮತ್ತು ಮೌಲ್ಯಮಾಪನ ಹಾಗೂ ಆಡಳಿತ ಅನುಭವ | ನಿಯೋಜನೆ/ ಗುತ್ತಿಗೆ |

| ಕ್ರಮ ಸಂ. | ಹುದ್ದೆಗಳು | ಶೈಕ್ಷಣಿಕ ವಿದ್ಯಾರ್ಹತೆ | ಅಪೇಕ್ಷಣೀಯ ಅರ್ಹತೆಗಳು | ಭರ್ತಿ ಮಾಡುವ ಮೂಲ |
|---|---|---|---|---|
| 3. | ನಿರ್ದೇಶಕರು (ಮೌಲ್ಯಮಾಪನ) | ಸಾರ್ವಜನಿಕ ನೀತಿ/ಸಾರ್ವಜನಿಕ ಆಡಳಿತ/ಅರ್ಥಶಾಸ್ತ್ರ/ವ್ಯವಹಾರ ನಿರ್ವಹಣೆ/ಅಭಿವೃದ್ಧಿ ಅಧ್ಯಯನಗಳಲ್ಲಿ ಪಿಹೆಚ್‌ಡಿ ಪದವಿ | ಲೇಖನಗಳು ಮತ್ತು ಪುಸ್ತಕಗಳ ಪ್ರಕಟಣೆ/ಬೋಧನೆ ಸಂಶೋಧನೆ ಮತ್ತು ಮೌಲ್ಯಮಾಪನ ಹಾಗೂ ಆಡಳಿತ ಅನುಭವ | ನಿಯೋಜನೆ/ ನೇಮಕಾತಿ/ ಗುತ್ತಿಗೆ |
| 4. | ನಿರ್ದೇಶಕರು (ಸಂಗ್ರಹಣೆ ಮತ್ತು ಸಮನ್ವಯ) | ಸಾರ್ವಜನಿಕ ನೀತಿ/ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿಯೊಂದಿಗೆ ಪಿಹೆಚ್‌ಡಿ ಮತ್ತು ಸಮೂಹ ಸಂವಹನ/ಮಾಧ್ಯಮ ಅಧ್ಯಯನ ಮತ್ತು ಸಮೂಹ ಮಾಧ್ಯಮ ಅಥವಾ ಸಂಪಾದನೆ/ಬರಹ/ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಡಿಪ್ಲೋಮಾದೊಂದಿಗೆ ಯಾವುದೇ ಸಮಾಜ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿಯೊಂದಿಗೆ ಪಿಹೆಚ್‌ಡಿ | ಲೇಖನಗಳು ಮತ್ತು ಪುಸ್ತಕಗಳ ಪ್ರಕಟಣೆ/ಸಂಶೋಧನೆ ಮತ್ತು ಮೌಲ್ಯಮಾಪನ ಅನುವಾದ ಮತ್ತು ಸಂಪಾದನೆ ಅನುಭವ. ಕೆಟಿಪಿಪಿ ಕಾಯ್ದೆಯಲ್ಲಿ ಹಣಕಾಸು ನಿಯಮಗಳ ಜ್ಞಾನ | ನಿಯೋಜನೆ/ ನೇಮಕಾತಿ/ ಗುತ್ತಿಗೆ |
| 5. | ನಿರ್ದೇಶಕರು (ಪ್ರಕಟಣೆ ಮತ್ತು ವಿಸ್ತರಣೆ) | ಸಾರ್ವಜನಿಕ ನೀತಿ/ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿಯೊಂದಿಗೆ ಪಿಹೆಚ್‌ಡಿ ಮತ್ತು ಸಮೂಹ ಸಂವಹನ/ಮಾಧ್ಯಮ ಅಧ್ಯಯನ ಮತ್ತು ಸಮೂಹ ಮಾಧ್ಯಮ ಅಥವಾ ಸಂಪಾದನೆ/ಬರಹ/ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಡಿಪ್ಲೋಮಾದೊಂದಿಗೆ ಯಾವುದೇ ಸಮಾಜ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿಯೊಂದಿಗೆ ಪಿಹೆಚ್‌ಡಿ | ಲೇಖನಗಳು ಮತ್ತು ಪುಸ್ತಕಗಳ ಪ್ರಕಟಣೆ/ಸಂಶೋಧನೆ ಮತ್ತು ಮೌಲ್ಯಮಾಪನ ಅನುವಾದ ಮತ್ತು ಸಂಪಾದನೆ ಅನುಭವ. ಕೆಟಿಪಿಪಿ ಕಾಯ್ದೆಯಲ್ಲಿ ಹಣಕಾಸು ನಿಯಮಗಳ ಜ್ಞಾನ | ನಿಯೋಜನೆ/ ನೇಮಕಾತಿ/ ಗುತ್ತಿಗೆ |
| 6. | ನಿರ್ದೇಶಕರು (ಸಾಮಾನ್ಯ) | ಸಾರ್ವಜನಿಕ ನೀತಿ/ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿಯೊಂದಿಗೆ ಪಿಹೆಚ್‌ಡಿ ಮತ್ತು ಸಮೂಹ ಸಂವಹನ/ಮಾಧ್ಯಮ ಅಧ್ಯಯನ ಮತ್ತು ಸಮೂಹ ಮಾಧ್ಯಮ ಅಥವಾ ಸಂಪಾದನೆ/ಬರಹ/ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಡಿಪ್ಲೋಮಾದೊಂದಿಗೆ ಯಾವುದೇ ಸಮಾಜ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿಯೊಂದಿಗೆ ಪಿಹೆಚ್‌ಡಿ | ಲೇಖನಗಳು ಮತ್ತು ಪುಸ್ತಕಗಳ ಪ್ರಕಟಣೆ/ಸಂಶೋಧನೆ ಮತ್ತು ಮೌಲ್ಯಮಾಪನ ಅನುವಾದ ಮತ್ತು ಸಂಪಾದನೆ ಅನುಭವ. ಕೆಟಿಪಿಪಿ ಕಾಯ್ದೆಯಲ್ಲಿ ಹಣಕಾಸು ನಿಯಮಗಳ ಜ್ಞಾನ | ನಿಯೋಜನೆ/ ನೇಮಕಾತಿ/ ಗುತ್ತಿಗೆ |
| 7. | ನಿರ್ದೇಶಕರು (ಸಾಂಖ್ಯಿಕ ವಿಶ್ಲೇಷಣೆ ಮತ್ತು ಮಾಹಿತಿ ತಂತ್ರಜ್ಞಾನ) | ಆಡಳಿತದಲ್ಲಿ ಅನುಭವ ಹಾಗೂ ಸ್ನಾತಕೋತ್ತರ ಪದವಿಯೊಂದಿಗೆ ಪಿಹೆಚ್‌ಡಿ ಅಥವಾ ಕರ್ನಾಟಕ ಸರ್ಕಾರದ ಗ್ರೂಪ್ ಎ ಸೇವೆಗಳ ಜಿಲ್ಲಾ ಮಟ್ಟದಲ್ಲಿ ಕೆಲಸ ಮಾಡಿರಬೇಕು. | ಅಂಕಿ ಅಂಶಗಳ ತಂತ್ರಜ್ಞಾನ ಹಣಕಾಸು ನಿಯಮಗಳ ಮತ್ತು ಕೆ.ಟಿ.ಪಿ.ಪಿ ಕಾಯ್ದೆ | ನಿಯೋಜನೆ/ ನೇಮಕಾತಿ/ ಗುತ್ತಿಗೆ |
| 8. | ಸಹನಿರ್ದೇಶಕರು (ಮೌಲ್ಯಮಾಪನ) | ಸಮಾಜ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿಯೊಂದಿಗೆ ಪಿಹೆಚ್‌ಡಿ | ಟಿಓಆರ್ ಗಳ ಮೌಲ್ಯಮಾಪನ ತಂತ್ರಗಳು/ತಯಾರಿಗಳ ಆಡಳಿತ ಜ್ಞಾನದಲ್ಲಿ ಅನುಭವ | ನಿಯೋಜನೆ/ ನೇಮಕಾತಿ/ ಗುತ್ತಿಗೆ |
| 9. | ಸಹ ನಿರ್ದೇಶಕರು (ಸಂಶೋಧನೆ) | ಸಮಾಜ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿಯೊಂದಿಗೆ ಪಿಹೆಚ್‌ಡಿ | ಲೇಖನಗಳು ಮತ್ತು ಪುಸ್ತಕಗಳ ಪ್ರಕಟಣೆ/ಬೋಧನೆ, ಸಂಶೋಧನೆ ಮತ್ತು ಮೌಲ್ಯಮಾಪನ ಅನುಭವ ಮತ್ತು ಟಿಓಆರ್ ಗಳ ತಯಾರಿಕೆಯ ಜ್ಞಾನ. | ನಿಯೋಜನೆ/ ನೇಮಕಾತಿ/ ಗುತ್ತಿಗೆ |

| ಕ್ರಮ ಸಂ. | ಹುದ್ದೆಗಳು | ಶೈಕ್ಷಣಿಕ ವಿದ್ಯಾರ್ಹತೆ | ಅಪೇಕ್ಷಣೀಯ ಅರ್ಹತೆಗಳು | ಭರ್ತಿ ಮಾಡುವ ಮೂಲ |
|---|---|---|---|---|
| 10. | ಸಹ ನಿರ್ದೇಶಕರು (ಅಂಕಿ ಅಂಶ ಮತ್ತು ಡೇಟಾ ವಿಶ್ಲೇಷಣೆ) | ಅಂಕಿ ಅಂಶ/ಸಮಾಜ ವಿಜ್ಞಾನ/ನೈಸರ್ಗಿಕ ವಿಜ್ಞಾನ/ವಾಣಿಜ್ಯ ಮತ್ತು ನಿರ್ವಹಣೆಯಲ್ಲಿ ಸ್ನಾತಕೋತರ ಪದವಿ ಅಥವಾ ಕರ್ನಾಟಕ ಸರ್ಕಾರದ ಗ್ರೂಪ್ ಎ ಸೇವೆಗಳ ಜಿಲ್ಲಾ ಮಟ್ಟದಲ್ಲಿ ಕೆಲಸ ನಿರ್ವಹಿಸಿರಬೇಕು | ಹಣಕಾಸು/ ಕಛೇರಿ ನಿರ್ವಹಣೆ/ ಅಂಕಿಅಂಶಗಳ ಪರಿಕರಗಳು/ಮಾದರಿ ಆಡಳಿತ ಜ್ಞಾನದಲ್ಲಿ ಅನುಭವ | ನಿಯೋಜನೆ/ ನೇಮಕಾತಿ/ ಗುತ್ತಿಗೆ |
| 11. | ಸಹ ನಿರ್ದೇಶಕರು (ಸಂಗ್ರಹಣೆ) | ಯಾವುದೇ ಸ್ನಾತಕೋತರ ಪದವೀಧರರಾಗಿರಬೇಕು. ಅಥವಾ ಸಮಾಜ ವಿಜ್ಞಾನ/ನೈಸರ್ಗಿಕ ವಿಜ್ಞಾನ/ವಾಣಿಜ್ಯ ಮತ್ತು ನಿರ್ವಹಣೆಯಲ್ಲಿ ಸ್ನಾತಕೋತ್ತರ ಪದವೀಧರರಾಗಿರಬೇಕು ಅಥವಾ ಕರ್ನಾಟಕ ಸರ್ಕಾರದ "ಗ್ರೂಪ್ ಎ" ಸೇವೆಗಳ ಜಿಲ್ಲಾ ಮಟ್ಟದಲ್ಲಿ ಕೆಲಸ ನಿರ್ವಹಿಸಿರಬೇಕು | ಹಣಕಾಸು/ ಕಛೇರಿ ನಿರ್ವಹಣೆ/ಕೆಟಿಪಿಪಿ ಕಾಯ್ದೆಯ ಆಡಳಿತ ಜ್ಞಾನದಲ್ಲಿ ಅನುಭವ | ನಿಯೋಜನೆ/ ನೇಮಕಾತಿ/ ಗುತ್ತಿಗೆ |
| 12. | ಸಹ ನಿರ್ದೇಶಕರು (ಸಮನ್ವಯ, ತರಬೇತಿ, ಇಂಟರ್ನ್ ಶಿಪ್ ಮತ್ತು ಅನುಷ್ಠಾನ) | ಸಮಾಜ ವಿಜ್ಞಾನ/ನೈಸರ್ಗಿಕ ವಿಜ್ಞಾನ/ವಾಣಿಜ್ಯ ಮತ್ತು ನಿರ್ವಹಣೆಯಲ್ಲಿ ಸ್ನಾತಕೋತ್ತರ ಪದವೀಧರರಾಗಿರಬೇಕು ಅಥವಾ ಕರ್ನಾಟಕ ಸರ್ಕಾರದ "ಗ್ರೂಪ್ ಎ" ಸೇವೆಗಳ ಜಿಲ್ಲಾ ಮಟ್ಟದಲ್ಲಿ ಕೆಲಸ ನಿರ್ವಹಿಸಿರಬೇಕು | ಹಣಕಾಸು /ಕಛೇರಿ ನಿರ್ವಹಣೆಯ ಆಡಳಿತ ಜ್ಞಾನದಲ್ಲಿ ಅನುಭವ | ನಿಯೋಜನೆ/ ನೇಮಕಾತಿ/ ಗುತ್ತಿಗೆ |
| 13. | ಆಡಳಿತಾಧಿಕಾರಿ | ಕೆ.ಎ.ಎಸ್/ಯಾವುದೇ ಇತರೆ "ಗ್ರೂಪ್ಎ" ಅಧಿಕಾರಿಗಳು ಅಥವಾ ಕರ್ನಾಟಕ ಸರ್ಕಾರದ ಗ್ರೂಪ್ ಎ ಸೇವೆಗಳ ಜಿಲ್ಲಾ ಮಟ್ಟದಲ್ಲಿ ಕೆಲಸ ನಿರ್ವಹಿಸಿರಬೇಕು | ಹಣಕಾಸು ಕಛೇರಿ ಆಡಳಿತ ಮತ್ತು ಕೆಟಿಪಿಪಿ ಕಾಯ್ದೆ ಹಾಗೂ ಮೌಲ್ಯ ಮಾಪನ ಅನುಭವದ ಜ್ಞಾನ | ನಿಯೋಜನೆ/ ನೇಮಕಾತಿ/ |
| 14. | ಲೆಕ್ಕಪತ್ರ ಅಧಿಕಾರಿ | ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಲ್ಲಿ ಎಂ.ಕಾಂ/ಬಿ.ಕಾಂ ಪ್ರಥಮ ದರ್ಜೆಯಲ್ಲಿ ಪದವಿ | ಟ್ಯಾಲಿ ಅನುಭವ | ನಿಯೋಜನೆ/ ನೇಮಕಾತಿ/ ಗುತ್ತಿಗೆ |
| 15. | ಎಂಐಎಸ್ ವೆಬ್ ಮ್ಯಾನೇಜರ್ | ಎಂಸಿಎ ಯಲ್ಲಿ ಪ್ರಥಮ ದರ್ಜೆ/ಕಂಪ್ಯೂಟರ್ ಸೈನ್ಸ್ ಎಂಜಿನಿಯರಿಂಗ್‌ನಲ್ಲಿ ಪದವಿ | ವೆಬ್ ಡಿಸೈನಿಂಗ್ ನಲ್ಲಿ ವಿಶೇಷತೆ ಮತ್ತು ತಂಡದ ನಾಯಕರಾಗಿ ಕೆಲಸದ ಅನುಭವ | ನೇಮಕಾತಿ/ ಗುತ್ತಿಗೆ |
| 16. | ರಿಸರ್ಚ್ ಫೆಲೋ | ಸಮಾಜ ವಿಜ್ಞಾನ/ನೈಸರ್ಗಿಕ ವಿಜ್ಞಾನ ಮತ್ತು ನಿರ್ವಹಣೆ/ಕಾನೂನು/ಮಾನವಶಾಸ್ತ್ರಗಳಲ್ಲಿ ಯಾವುದೇ ಸ್ನಾತಕೋತರ ಪದವಿ. | ಸಂಶೋಧನಾ ಅನುಭವ ಮತ್ತು ಪ್ರಕಟಣೆಗಳು ಹಾಗೂ ಅಗತ್ಯವಿರುವ ಕ್ಷೇತ್ರಗಳ ಜ್ಞಾನ ಮತ್ತು ಕೌಶಲ್ಯಗಳು | ನೇಮಕಾತಿ/ ಗುತ್ತಿಗೆ |
| 17. | ಕಛೇರಿ ಸಹಾಯಕ | ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಯಾವುದೇ ಪದವಿ | ಗಣಕಯಂತ್ರ ಕೆಲಸ ನಿರ್ಹಣೆಯ ಜ್ಞಾನ | ನೇಮಕಾತಿ/ ಗುತ್ತಿಗೆ |
| 18. | ಸಿಇಓ ರವರ ಆಪ್ತ ಕಾರ್ಯದರ್ಶಿ | ಇಂಗ್ಲೀಷ್/ಕನ್ನಡ ಶೀಘ್ರಲಿಪಿಯೊಂದಿಗೆ ಸೆಕ್ರೆಟರಿಯಟ್ ಪ್ರಾಕ್ಟೀಸ್/ ಡಿಪ್ಲೊಮಾ ಪದವಿ ಪಡೆದಿರಬೇಕು | ಸಮಾನಾಂತರ ಹುದ್ದೆಯಲ್ಲಿ ಹಿಂದಿನ ಅನುಭವ | ನೇಮಕಾತಿ/ ಗುತ್ತಿಗೆ |
| 19. | ಡಿಟಿಪಿ ಆಪರೇಟರ್ಸ್ | ಪಿಯುಸಿ ಮತ್ತು ಗ್ರಾಫಿಕ್ಸ್ ನಲ್ಲಿ ಕಂಪ್ಯೂಟರ್ ಕೌಶಲ್ಯ ಹೊಂದಿರಬೇಕು | ಗಣಕಯಂತ್ರ ಕೆಲಸ ನಿರ್ಹಣೆಯ ಜ್ಞಾನ | ನೇಮಕಾತಿ/ ಗುತ್ತಿಗೆ |

| ಕ್ರಮ ಸಂ. | ಹುದ್ದೆಗಳು | ಶೈಕ್ಷಣಿಕ ವಿದ್ಯಾರ್ಹತೆ | ಅಪೇಕ್ಷಣೀಯ ಅರ್ಹತೆಗಳು | ಭರ್ತಿ ಮಾಡುವ ಮೂಲ |
|---|---|---|---|---|
| 20. | ಹಿರಿಯ ಚಾಲಕ | 7ನೇ ತರಗತಿ ತೇರ್ಗಡೆ ಜೊತೆಗೆ ಲಘು ವಾಹನ ಚಾಲನಾ ಪರವಾನಿಗೆ | - | ನೇಮಕಾತಿ/ ಗುತ್ತಿಗೆ |
| 21. | ದಲಾಯತ್ | 10ನೇ ತರಗತಿ ಉತ್ತೀರ್ಣರಾಗಿರಬೇಕು | - | ನೇಮಕಾತಿ/ ಗುತ್ತಿಗೆ |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಪಾಪಣ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ(ಎಸ್-1),
ಯೋಜನೆ, ಕಾರ್ಯಕ್ರಮ, ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

**ಇವರಿಗೆ:**

1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಆಯುಕ್ತರು ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
6. ಸರ್ಕಾರದ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
7. ಎಲ್ಲಾ ಇಲಾಖಾ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
8. ಮುಖ್ಯ ಮೌಲ್ಯಮಾಪನಾಧಿಕಾರಿಗಳು, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ, ಬಹುಮಹಡಿ ಕಟ್ಟಡ, ಬೆಂಗಳೂರು.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.